ಕಂಡಿದ್ದ ಶಾಂತಿನಾಥರ 'ದರ್ಶನ'ದ ಬಗ್ಗೆ ಬರೆದೆ.

ದೇಸಾಯರು ಮಾನಸಿಕವಾಗಿ ಕರ್ನಾಟಕದ, ಕನ್ನಡದ ತಮ್ಮ ನೆಲದಿಂದ ಎಂದೂ ದೂರವಾಗಿರಲಿಲ್ಲ, ಆದರೆ ಮನೆಯವರ ಒತ್ತಾಸೆಯಿಂದಾಗಿ ಹಳಿಯಾಳ, ಧಾರವಾಡ, ಅಮ್ಮಿನಭಾವಿ, ಬೆಂಗಳೂರು ಮುಂತಾದ ನೆಲೆಗಳಿಂದ ಉಂಟಾಗಿದ್ದ ದೂರತ್ವವನ್ನು, ಅಂತರವನ್ನು, ಗ್ಯಾಪನ್ನು ಭರಿಸುವುದು ಮಾತ್ರ ಅವರಿಗೆ ವಿವರಿಸಲಾಗದ, ಕಾದಂಬರಿ ಅಥವಾ ಕತೆಯಾಗಿ ಪರಿವರ್ತಿಸಲಾಗದ ವ್ಯಥೆಯಾಗಿತ್ತು. ಅವರು ದೈಹಿಕವಾಗಿ ನಮ್ಮನ್ನು ಅಗಲಿದ ಸುದ್ದಿ ಕನ್ನಡದ ಜನರಿಗೆ ತಡವಾಗಿ ತಿಳಿಯಿತು; ಆಗ ಮಾತ್ರ ನಮ್ಮ ನೆಲ, ನೆಲೆಯ ಕಕ್ಕುಲಾತಿ ನಮ್ಮನ್ನು ಕಂಗೆಡಿಸಿತ್ತು. ನನಗೆ ಪ್ರಿಯರಾಗಿದ್ದ ವಿ.ಎಂ. ಇನಾಮದಾರ, ಜಿ.ಎ. ಕುಲಕರ್ಣಿ ಅವರಂಥವರು ನಿರ್ಗಮಿಸಿದ ಹಿನ್ನೆಲೆ ನೆನೆಯುತ್ತ ದೇಸಾಯರ 'ಪರಿನಿರ್ವಾಣ' ನನ್ನನ್ನು ಕಲಕಿದೆ.

ಶಾಂತಿನಾಥರು ಕೊನೆಗಾಲದಲ್ಲಿ ಬರೆದ ಅವರ ಕಾದಂಬರಿ 'ಓಂ ಣಮೋ'. ಕೇಂದ್ರ ಸಾಹಿತ್ಯ ಅಕಾದೆಮಿಯ ಆಗಿನ ಸಮಿತಿ ಆ ಕಾದಂಬರಿಯನ್ನು ಆಯ್ಕೆ ಮಾಡಿ ದೇಸಾಯರಿಗೆ ಗೌರವ ಸಲ್ಲಿಸಿ, ಪರೋಕ್ಷವಾಗಿ ಋಣದಾಯ ತೀರಿಸಿತು. ಆದರೆ, ತಮ್ಮದೇ ಕಾದಂಬರಿಗೆ ಇಂಥ ಮಹತ್ವದ ಗೌರವ ಸಲ್ಲುತ್ತಿದ್ದ ಅವಧಿಯಲ್ಲಿ ಆ ಸುದ್ದಿಯನ್ನು ಕೇಳಲು, ಸಂಭ್ರಮಿಸಲು ಶಾಂತಿನಾಥರು ಬದುಕಿರಬೇಕಿತ್ತು.

ಕೇಂದ್ರ ಸಾಹಿತ್ಯ ಅಕಾದೆಮಿಯು ಶಾಂತಿನಾಥರ ಆತ್ಮೀಯ ಸಹೋದ್ಯೋಗಿಯಾಗಿದ್ದ ಡಾ. ಜಿ.ಎಸ್. ಆಮೂರ ಅವರಿಂದ ಒಂದು ಮೊನೊಗ್ರಾಫ್ ಬರೆಸಿ ಪ್ರಕಟಿಸಿತು. ನಾನು ಅಕಾದೆಮಿಯ ಕನ್ನಡ ವಿಭಾಗದ ಸಂಚಾಲಕನಾಗಿದ್ದೆ; ಆಗ ಧಾರವಾಡದಲ್ಲಿ ಆ ಕೃತಿಯ ಬಿಡುಗಡೆ, 'ಓಂ ಣಮೋ' ಬಗ್ಗೆ ವ್ಯಾಖ್ಯಾನ ಹಾಗೂ ದೇಸಾಯರ ಕುರಿತು ದೂರದರ್ಶನದವರು ಸಿದ್ಧಪಡಿಸಿದ್ದ ಟೆಲಿಚಿತ್ರವನ್ನು ಪ್ರದರ್ಶಿಸುವ ಕಾರ್ಯಕ್ರಮ ಏರ್ಪಡಿಸಿದೆ. ಕೊಲ್ಹಾಪುರದಿಂದ ಆಗಮಿಸಿದ್ದ ಸುಮಿತ್ರಾ ದೇಸಾಯಿ ಮತ್ತು ಶಾಂತಿನಾಥರ ಇಲ್ಲಿದ್ದ ಶಿಷ್ಯರು, ಗೆಳೆಯರು, ಬಂಧುಗಳು ನಾವೆಲ್ಲ ಕೂಡಿ ಅವರನ್ನು ನೆನೆಸಿಕೊಂಡೆವು.

ಮರುದಿನ ಸುಮಿತ್ರಾ ನಮ್ಮ ಮನೆಗೂ ಬಂದರು. ತುಂಬ ಆಪ್ತವಾಗಿ ಮಾತಾಡಿದರು. ನಮ್ಮ ಸಂಪರ್ಕ ಮತ್ತು ಸಾಮೀಪ್ಯದಿಂದ ಶಾಂತಿನಾಥರು ಪಡೆಯುತ್ತಿದ್ದ ಮನಃಶಾಂತಿಯನ್ನು, ಹೇಮಾ ಪ್ರಕಟಿಸಿದ ಅವರ ಕಥಾಸಂಗ್ರಹಗಳನ್ನು ಪ್ರೀತಿಯಿಂದ ನೆನೆದರು. ಸುಮಿತ್ರಾರ ದನಿಯಲ್ಲಿ ಶಾಂತಿನಾಥರ ಅಂತರಂಗ ನುಡಿಯಲಾರಂಭಿಸಿತ್ತು.


## ಸಿದ್ಧಲಿಂಗ ಪಟ್ಟಣಶೆಟ್ಟಿ

ಕನ್ನಡದ ಪ್ರಮುಖ ಕವಿ, ಕಥೆಗಾರ, ಅಂಕಣಕಾರ ಹಾಗೂ ಸೃಜನಶೀಲ ಅನುವಾದಕ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಹಿಂದೀ ಅಧ್ಯಾಪಕರಾಗಿ ನಿವೃತ್ತರು. 85 ಕನ್ನಡ, ಆರು ಹಿಂದೀ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಗಿರಿಜವ್ವನ ಮಗ' ಆತ್ಮಕಥನ, 'ನೀನಾ', 'ಔರಂಗಜೇಬ', 'ಪರದೇಸಿ ಹಾಡುಗಳು', 'ನೂರಾರು ಪದ್ಯಗಳು', 'ಪ್ರತೀಕ್ಷೆ', 'ಮತ್ತೆ ಬಂದಿದ್ದಾಳೆ', 'ಅಯಸ್ಕಾಂತ', 'ಇಂದು ರಾತ್ರಿಯ ಹಾಗೆ', 'ಇಷ್ಟು ಹೇಳಿದ ಮೇಲೆ', 'ಅಪರಂಪಾರ' ಮುಂತಾದ 18 ಕಾವ್ಯ, ಮೂರು ಕಥಾಸಂಗ್ರಹ, ಆರು ಅಂಕಣ, 10 ವಿಮರ್ಶೆ, ಒಂಬತ್ತು ಸಂಪಾದನೆ, ಆರು ಅನುವಾದಿತ ಕಾವ್ಯ ಸಂಕಲನ, 18 ಅನುವಾದಿತ ನಾಟಕ ಕೃತಿಗಳನ್ನು ಪಟ್ಟಣಶೆಟ್ಟರು ಇದುವರೆಗೆ ಪ್ರಕಟಿಸಿದ್ದಾರೆ.